ನಿವೇಶನಗಳ ಹಂಚಿಕೆ ಬಗ್ಗೆ

36 (177) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯವರು ಡಾಬಸ್‌ಪೇಟೆಯ ಬಳಿ ನಿವೇಶನ ಹಂಚಿಕೆ ಮಾಡಲು 2009ರಲ್ಲಿ ಸಾವಿರಾರು ಗ್ರಾಹಕರುಗಳಿಂದ ಬ್ಯಾಂಕ್ ಮೂಲಕ ಹಣ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಗ್ರಾಹಕರು ಅರ್ಜಿ ಸಲ್ಲಿಸಿರುತ್ತಾರೆ; ಅರ್ಜಿ ಸಲ್ಲಿಸಿ, ಹಣ ಪಾವತಿಸಿದ ಗ್ರಾಹಕರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ, ಎಷ್ಟು ಗ್ರಾಹಕರುಗಳಿಗೆ ಹಂಚಿಕೆ ಮಾಡಲು ಬಾಕಿ ಉಳಿದಿರುತ್ತದೆ;

ಈ) ಹಾಗಿಲ್ಲದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಹಂಚಿಕೆ ಮಾಡಲಾಗುವುದು;

ಉ) ಈ ಬಗ್ಗೆ ಗೃಹ ಮಂಡಳಿ ಮತ್ತು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಹೌದು. ಡಾಬಸ್‌ಪೇಟೆಯ ಬಳಿ ತ್ಯಾಮಗೊಂಡ್ಲು ಗ್ರಾಮದಲ್ಲಿ ನಿವೇಶನಾಕಾಂಕ್ಷಿಗಳ ಬೇಡಿಕೆ ಸಮೀಕ್ಷೆ ಮಾಡಲಾಗಿದ್ದು ಅವರುಗಳಿಂದ ನೊಂದಣಿ ಶುಲ್ಕ ಪಡೆಯಲಾಗಿದೆ.

ಆ) ಒಟ್ಟು 8645 ಗ್ರಾಹಕರು ನೊಂದಣಿ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ. ಇದುವರೆವಿಗೂ ಯಾವುದೇ ನಿವೇಶನ ಹಂಚಿಕೆ ಮಾಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಮತ್ತು ಉ) ನೆಲಮಂಗಲ ತಾಲ್ಲೂಕು, ಡಾಬಸ್‌ಪೇಟೆಯ ಬಳಿ ತ್ಯಾಮಗೊಂಡ್ಲು ಹೋಬಳಿ ವ್ಯಾಪ್ತಿಯ ಬ್ಯಾಡರಹಳ್ಳಿ, ತಿಪ್ಪಗೊಂಡನಹಳ್ಳಿ ಮತ್ತು ತಾಳೇಕೇರೆ ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ 100 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನನ್ನು ಗುರುತಿಸಲಾಗಿದ್ದು, ಸದರಿ ಜಮೀನುಗಳಿಗೆ ಜಿಲ್ಲಾ ಭೂ-ಖರೀದಿ ಸಮಿತಿ ಸಭೆಯಲ್ಲಿ ಕೈಗೊಂಡಿರುವ ನಿರ್ಣಯದ ಮೇರೆಗೆ ಖರೀದಿ ಪ್ರಕ್ರಿಯೆಗೆ ಕ್ರಮ ವಹಿಸಲಾಗುತ್ತಿದೆ. ಸದರಿ ಪ್ರಕ್ರಿಯೆ ನಂತರ ಬಡಾವಣೆಯನ್ನು ಅಭಿವೃದ್ಧಿಪಡಿಸಿ ಹಂಚಿಕೆಗೆ ಕ್ರಮ ವಹಿಸಲಾಗುವುದು.

11.40 ಎ.ಎಂ

ಶ್ರೀ ಹೆಚ್.ಸಿ. ಬಾಲಕೃಷ್ಣ: ಡಾಬಸ್‌ಪೇಟೆಯ ಬಳಿ ಹೌಸಿಂಗ್ ಬೋರ್ಡ್ ವತಿಯಿಂದ ಸೈಟುಗಳನ್ನು ವಿತರಣೆ ಮಾಡಬೇಕೆಂದು ಈಗಾಗಲೇ ಸಮೀಕ್ಷೆ ಕೂಡ ಮಾಡಿದ್ದೀರಿ ಮತ್ತು ನೋಂದಣಿ ಶುಲ್ಕವನ್ನು ಕೂಡ ಕಟ್ಟಿಸಿಕೊಂಡಿದ್ದೀರಿ. ಅಲ್ಲಿ ಸೈಟುಗಳಿಗೆ ಸಾಕಷ್ಟು ಡಿಮ್ಯಾಂಡ್ ಕೂಡ ಬಂದಿದೆ. ಎಷ್ಟು ದಿವಸಗಳಲ್ಲಿ ಈ ಪ್ರಾಜೆಕ್ಟ್ ಅನ್ನು ಮುಗಿಸುತ್ತೀರಿ?

ಶ್ರೀ ವಿ. ಸೋಮಣ್ಣ: ಇದರ ಬಗ್ಗೆ ನಮಗೂ ಸಾಕಷ್ಟು ಕಾಳಜಿ ಇದೆ. ಇದಕ್ಕಾಗಿ ನಾವು ಈಗಾಗಲೇ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಹೋಬಳಿ ವ್ಯಾಪ್ತಿಯ ಬ್ಯಾಡರಹಳ್ಳಿ, ತಿಪ್ಪಗೊಂಡನಹಳ್ಳಿ ಮತ್ತು ತಾಳೇಕೆರೆ ಗ್ರಾಮಗಳಲ್ಲಿ 100 ಎಕರೆ 03 ಗುಂಟೆ ಜಮೀನನ್ನು ಗುರುತಿಸಿದ್ದೇವೆ. ನಮಗೆ ಅಲ್ಲಿ ಸೈಟುಗಳಿಗಾಗಿ ಬಂದಿರುವ ಡಿಮ್ಯಾಂಡುಗಳ ಸಂಖ್ಯೆ 8,645. ಈ ಸೈಟುಗಳ ಆಕಾಂಕ್ಷಿಗಳಿಂದ 1,08,90,512 ರೂಪಾಯಿಗಳು ನೋಂದಣಿ ಶುಲ್ಕವಾಗಿ ನಮಗೆ ಬಂದಿದೆ. ನಾವು ಮಾಡಿರುವ ಡಿಮ್ಯಾಂಡ್ ಸರ್ವೆ ಪ್ರಕಾರ ನಮಗೆ 400 ಎಕರೆ ಜಮೀನು ಬೇಕಾಗಿದೆ. ಈಗಾಗಲೇ ಸುಮಾರು 100 ಎಕರೆಯನ್ನು ಗುರುತಿಸಿದ್ದು, ಅದು ಜಿಲ್ಲಾಧಿಕಾರಿಗಳಿಗೆ ರೇಟ್ ಫಿಕ್ಸೇಷನ್‌ಗೆ ಹೋಗಿದೆ. ಇನ್ನುಳಿದಿರುವ 300 ಎಕರೆ ಜಮೀನನ್ನು ನಾವು ತಕ್ಷಣವೇ ಗುರುತಿಸುವ ಕೆಲಸವನ್ನು ಮಾಡಿ, ಆ ಭಾಗದಲ್ಲಿರುವ ಕಾರ್ಮಿಕರು, ಮತ್ತೊಬ್ಬರು, ಮಗದೊಬ್ಬರು, ಹೀಗೆ ಜನಸಾಮಾನ್ಯರಿಗೆ ತಲುಪುವಂತೆ, ಅಲ್ಲಿ 400 ಎಕರೆ ವಿಸ್ತೀರ್ಣದಲ್ಲಿ ಒಂದು ಹೊಸ ಬಡಾವಣೆಯನ್ನು ಮಾಡಿ ಅಲ್ಲಿ ಎಲ್ಲ ಮೂಲಭೂತ ಸೌಕರ್ಯಗಳನ್ನು ನೀಡುವುದಕ್ಕೆ ಒಂದು ಕ್ರಿಯಾ ಯೋಜನೆಯನ್ನು ಮಾಡಿದ್ದೇವೆ. ತಕ್ಷಣವೇ ನಾವು ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂದು ಹೇಳಿ. ಇದಕ್ಕೆ ಒಂದು ಕಾಲಮಿತಿ ಹೇಳಿ.

ಶ್ರೀ ವಿ. ಸೋಮಣ್ಣ: ನಾವು 4(1), 6(1) ನೋಟಿಫಿಕೇಷನ್‌ಗಳನ್ನು ಮಾಡುತ್ತಾ ಹೋದರೆ ಅದಕ್ಕೆ ಸಾಕಷ್ಟು ಸಮಯ ಹಿಡಿಯುತ್ತದೆ ಎಂದು ನಾವೇನು ಚಿಂತನೆ ಮಾಡಿದ್ದೇವೆ ಎಂದರೆ, ಜಮೀನಿನ ಮಾಲೀಕರಾದ ರೈತರ ಹತ್ತಿರವೇ ನೇರವಾಗಿ ಚರ್ಚೆ ಮಾಡಿ, ಅವರ ಜಮೀನಿಗೆ ಮಾರ್ಕೆಟ್ ವ್ಯಾಲ್ಯೂ ನಿಗದಿಪಡಿಸಿ, ಆ ಹಣವನ್ನು ಅವರಿಗೆ ಚೆಕ್ ಮುಖಾಂತರ ಕೊಡುವ ಪ್ರಕ್ರಿಯೆಯನ್ನು ಮಾಡಬೇಕೆಂದಿದ್ದೇವೆ. ಇವತ್ತು ಡಾಬಸ್‌ಪೇಟೆ ಕೈಗಾರಿಕಾ ಪ್ರದೇಶವಾಗಿದೆ. ಅಲ್ಲಿ ಸೈಟುಗಳಿಗಾಗಿ ಸಾಕಷ್ಟು ಡಿಮ್ಯಾಂಡ್ ಇದೆ. ಈಗ

100 ಎಕರೆ ಗುರುತಿಸಿರುವುದಕ್ಕೆ ಸುಮಾರು 8–10 ತಿಂಗಳುಗಳ ಕಾಲ ಸುತ್ತಾಟವಾಗಿದೆ. ಇನ್ನೂ 300 ಎಕರೆಯನ್ನು ತೆಗೆದುಕೊಳ್ಳಲು ಇನ್ನೂ ಸಮಯವಾಗುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ದಯಮಾಡಿ ಇದನ್ನು ಎರಡು ಹಂತಗಳಲ್ಲಿ ಮಾಡಿ.

ಶ್ರೀ ವಿ. ಸೋಮಣ್ಣ: ಮೊದಲನೇ ಹಂತವನ್ನು ತೆಗೆದುಕೊಂಡು, ಇದರ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ತಕ್ಷಣವೇ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ಕುಡಿಯುವ ನೀರಿನ ಸಮಸ್ಯೆ

37 (182) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಲವಾರು ಬಡಾವಣೆಗಳಲ್ಲಿ 4–5 ದಿನಗಳಾದರೂ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೇ ಇರುವುದು ನಿಜವಲ್ಲವೇ;

ಇ) ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):

ಅ) ಹೌದು.

ಆ) ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುತ್ತಿರುವ ಮುಖ್ಯ ವಿದ್ಯುತ್ ಸ್ಥಾವರಗಳಾದ ತೊರೆಕಾಡನಹಳ್ಳಿ, ಹಾರೋಹಳ್ಳಿ ಮತ್ತು ಟಾಟಗುಣಿ ಇಲ್ಲಿ ವಿದ್ಯುತ್ ವ್ಯತ್ಯಯ ಅಥವಾ ಇನ್ಯಾವುದೇ ತುರ್ತು ದುರಸ್ಥಿ ಕಾರ್ಯಗಳನ್ನು ಕೈಗೊಂಡಾಗ, ನಗರಕ್ಕೆ ತಲುಪುವ ನೀರಿನ ಪ್ರಮಾಣದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಇದರಿಂದ ಕೊಳವೆ ಮಾರ್ಗಗಳು ಖಾಲಿಯಾಗಿ